ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,
ಶ್ರೀರಂಗಪಟ್ಟಣ.

ಸಿ.ಸಿ.ಃ 344/2013

ಪಿ. ಡಬ್ಲ್ಯೂಃ 06
ಸಿ. ಡಬ್ಲ್ಯೂಃ 16

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಶ್ರೀನಿವಾಸ |
| ತಂದೆ/ಪತಿಯ ಹೆಸರು | ಃ | ಗೋಪಾಲಯ್ಯ |
| ವಯಸ್ಸು | ಃ | 42 ವರ್ಷ |
| ವೃತ್ತಿ | ಃ | ಪೋಲೀಸ್ ಮುಖ್ಯ ಪೇದೆ |
| ವಾಸ | ಃ | ಕೊಪ್ಪ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 25.01.2023
ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ನಾನು ಅರಕೆರೆ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಪೇದೆಯಾಗಿ 2009 ರಿಂದ 2014 ವರೆಗೆ ನಾನು ಕೆಎ-11-ಜಿ-250 ಇಲಾಖಾ ಜೀಪ್ ನಲ್ಲಿ ಚಾಲಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 15.08.2013 ರಂದು ನಾನು ಠಾಣೆಯಲ್ಲಿ ಹಗಲು ಕರ್ತವ್ಯದಲ್ಲಿದ್ದಾಗ ನಮ್ಮ ಠಾಣೆಯ ಪಿ.ಎಸ್.ಐ ರವರಿಗೆ ಬಂದ ಬಾತ್ಮಿಯಂತೆ ಗಾಮನಹಳ್ಳಿ ಗ್ರಾಮದ ಚೆನ್ನಪ್ಪ ಎಂಬುವವರ ಅಂಗಡಿಯಲ್ಲಿ ಯಾವುದೇ ಪರವಾನಿಗೆ ಇಲ್ಲದೆ ಹೆಚ್ಚಿನ ಹಣ ಗಳಿಸುವ ಉದ್ದೇಶದಿಂದ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆಂದು ಬಂದ ಮಾಹಿತಿಯಂತೆ ನನ್ನನ್ನು ಮತ್ತು ಪಿಸಿ 120, ಹೆಚ್.ಸಿ.98, ಪಿಸಿ.102 ಆನಂದ ರವರಿಗೆ ಮಾಹಿತಿ ತಿಳಿಸಿ ನಮ್ಮ ಠಾಣೆಯ ಮುಂಭಾಗದಲ್ಲಿದ್ದ ಚನ್ನೇಗೌಡ, ಪ್ರಕಾಶ್ ರವರಿಗೂ ಸಹ ಮಾಹಿತಿ ತಿಳಿಸಿ ಪಂಚರಾಗಿ ಇರುವಂತೆ ಅವರನ್ನು ಕೇಳಿಕೊಂಡು ಅವರಿಗೆ ನೋಟೀಸ್ ನೀಡಿ ಠಾಣೆಯಿಂದ 04.45 ಗಂಟೆ ಸುಮಾರಿಗೆ ಕೆಎ-11-ಜಿ-250 ಇಲಾಖಾ ಜೀಪ್ ನಲ್ಲಿ ಹೊರಟು ಗಾಮನಹಳ್ಳಿ ಗ್ರಾಮಕ್ಕೆ 05.15 ಸಮಯಕ್ಕೆ ಹೋಗಿರುತ್ತೇವೆ.

ಗಾಮನಹಳ್ಳಿ ಗ್ರಾಮದ ಚೆನ್ನಪ್ಪ ಎಂಬುವವರ ಅಂಗಡಿ ಹತ್ತಿರ ಜೀಪ್ ನಿಲ್ಲಿಸಿ ನೋಡಲಾಗಿ ಅಲ್ಲಿ ಇಬ್ಬರು ಆಸಾಮಿಗಳು 2 ಬಾಟಲಿ ಮದ್ಯವನ್ನು ತೆಗೆದುಕೊಂಡು ಪ್ಲಾಸ್ಟಿಕ್ ಲೋಟದಲ್ಲಿ ಹಾಕಿ ಕುಡಿಯುತ್ತಾ ಕುಳಿತಿದ್ದು ನಮ್ಮ ಜೀಪ್ ನೋಡಿ ಓಡಿ ಹೋದರು. ಆಗ ನಾವು ಮತ್ತು ಪಿ.ಎಸ್.ಐ ರವರು ಜೀಪ್ ನಿಂದ ಇಳಿದು ಅಂಗಡಿ ಹತ್ತಿರ ಹೋಗಿ ಅಲ್ಲಿ ಇದ್ದ ಅರ್ಧ ತುಂಬಿದ ಮದ್ಯದ ಬಾಟಲಿಗಳು ಮತ್ತು ಲೋಟಗಳನ್ನು ತೆಗೆದುಕೊಂಡು ಅಲ್ಲೇ

ಅಂಗಡಿಯಲ್ಲಿದ್ದ ಆಸಾಮಿಯನ್ನು ವಿಚಾರಣೆ ಮಾಡಿದ್ದು ಆತನ ಹೆಸರು ಚೆನ್ನಪ್ಪ ಎಂದು ಗೊತ್ತಾಯಿತು.

ಪಿ.ಎಸ್.ಐ ರವರು ಚೆನ್ನಪ್ಪ ನನ್ನು ನಿಮ್ಮ ಅಂಗಡಿಯಲ್ಲಿ ಅಕ್ರಮವಾಗಿ ಯಾವುದೇ ಲೈಸನ್ಸ ಇಲ್ಲದೇ ಮದ್ಯ ಮಾರಾಟ ಮಾಡುತ್ತಿದ್ದೀರಿ ಎಂದು ವಿಚಾರಿಸಿ ಅಂಗಡಿಯನ್ನು ಪರಿಶೀಲಿಸಿದಾಗ ಅಂಗಡಿಯ ಮೇಲೆ ಇದ್ದ ಒಂದು ರಟ್ಟಿನ ಬಾಕ್ಸ ಅನ್ನು ತೆಗೆದು ಪಂಚರ ಸಮಕ್ಷಮ ನೋಡಿದಾಗ ಅದರಲ್ಲಿ 44 ಬಾಟಲು ಸೂಪರ್ ಜಾಕ್ ಫೈನ್ ಬ್ರಾಂದಿ ಎಂದು ಹೆಸರಿರುವ 180 ಎಂ.ಎಲ್ ಅಳತೆಯ ಇರುವುದು ಕಂಡುಬಂದಿತ್ತು.

ಚೆನ್ನಪ್ಪನನ್ನು ಮದ್ಯ ಮಾರಾಟ ಮಾಡುವ ಸಲುವಾಗಿ ಲೈಸನ್ಸ ಇರುವ ಬಗ್ಗೆ ವಿಚಾರಣೆ ಮಾಡಿದ್ದು ಆತ ತನ್ನ ಹತ್ತಿರ ಯಾವುದೇ ಲೈಸನ್ಸ್ ಇಲ್ಲವೆಂದು ತಿಳಿಸಿರುತ್ತಾನೆ. ನಂತರ ಪಂಚರ ಸಮಕ್ಷಮ 05.30-06.15 ವರೆಗೆ ಮಹಜರ್ ಕ್ರಮ ಜರುಗಿಸಲಾಗಿದೆ. ನಂತರ ಮಹಜರ್ ಕಾಲಕ್ಕೆ ಅಲ್ಲಿ ದೊರೆತ 2 ಪೂರ್ತ ಮದ್ಯ ತುಂಬಿದ ಬಾಟಲಿಗಳು, 2 ಅರ್ಧ ತುಂಬಿದ ಬಾಟಲಿಗಳನ್ನು, 2 ಪ್ಲಾಸ್ಟಿಕ್ ಲೋಟಗಳನ್ನು ವಶಕ್ಕೆ ಪಡೆದು ರಾಸಾಯನಿಕ ಪರೀಕ್ಷೆಗಾಗಿ ಅವುಗಳನ್ನು ಬಿಳಿಯ ಬಟ್ಟೆಯಲ್ಲಿ ಹಾಕಿ ಬಾಯಿ ಹೊಲೆದು ಎಸ್ ಎಂಬ ಅಕ್ಷರದಿಂದ ಸೀಲ್ ಮಾಡಿ ಪಂಚರ ಸಮಕ್ಷಮ ಅವುಗಳನ್ನು ಪಿ.ಎಸ್.ಐ ರವರು ತಮ್ಮ ವಶಕ್ಕೆ ಪಡೆದರು.

ನಂತರ 06.25 ಸಮಯಕ್ಕೆ ಚೆನ್ನಪ್ಪನನ್ನು ಜೀಪ್ ನಲ್ಲಿ ಕೂರಿಸಿ ವಿಚಾರಣೆಗಾಗಿ ಠಾಣೆಗೆ ಕರೆದುಕೊಂಡು ಬರುವ ಕಾಲಕ್ಕೆ ಅಲ್ಲಿಯೇ ಇದ್ದ ಕೆಲವು ಜನ ಜೀಪ್ ಅನ್ನು ಅಡ್ಡಗಟ್ಟಿ ಅವರುಗಳಲ್ಲಿ ಕೃಷ್ಣ ಎಂಬುವವರು ನನ್ನನ್ನು ಜೀಪ್ ನಿಂದ ಬಲವಂತವಾಗಿ ಕೆಳಗೆ ಇಳಿಸಿಕೊಂಡು ನನ್ನ ಕತ್ತಿನ ಹತ್ತಿರ ಹೊಡೆದು ಕೆಳಗೆ ಕೆಡವಿದನು. ನಂತರ ಮುತ್ತುರಾಜ್ ಎಂಬುವವರು ಪಿ.ಎಸ್.ಐ ರವರ ಕತ್ತಿನ ಪಟ್ಟಿ ಹಿಡಿದು ಎಳೆದಾಡಿದನು. ನಂತರ ಮಹೇಶ್ ಬಿನ್ ಚಾಟಿ ಮಾಯಿಗಯ್ಯ, ಮಹೇಶ್ ಬಿನ್ ಶಿವಸ್ವಾಮಿ ಎಂಬುವವರು ಪಿಸಿ. ಆನಂದ್ ರವರನ್ನು ಹಿಡಿದು ಎಳೆದಾಡಿ ಆತನ ಕತ್ತಿನ ಬಳಿ ಹಾಗೂ ಕೈಗೆ ಹೊಡೆದು ಆತ ಧರಿಸಿದ್ದ ಸಮವಸ್ತ್ರವನ್ನು ಹರಿದು ಹಾಕಿದರು. ನಂತರ ಪುಟ್ಟಸ್ವಾಮಿ ಎಂಬುವವರು ಪಿಸಿ. ರವಿ ರವರು ಧರಿಸಿದ್ದ ಬಟ್ಟೆಯನ್ನು ಹಿಡಿದು ಎಳೆದಾಡಿ ಆತನಿಗೆ ಕೈಗಳಿಂದ ಹೊಡೆದಿರುತ್ತಾರೆ.

ನಂತರ ಅವರು ಚೆನ್ನಪ್ಪನನ್ನು ಜೀಪ್ ನಿಂದ ಕೆಳಗೆ ಇಳಿಸಿ, ಚೆನ್ನಪ್ಪ ತನ್ನ ಅಂಗಡಿಯಲ್ಲಿದ್ದ ತೂಕ ಮಾಡುವ ಬಟ್ಟನ್ನು ತೆಗೆದುಕೊಂಡು ಪಿಸಿ ಚೌಡಯ್ಯ ನವರ ಹಣೆಯ ಬಳಿ ಹೊಡೆದು ರಕ್ತಗಾಯ ಪಡಿಸಿದರು. ನಂತರ ಎಲ್ಲರೂ ಸಹ ನಮ್ಮ ಗ್ರಾಮದಲ್ಲಿ ನಾವು ಏನಾದರೂ ಮಾಡಿಕೊಳ್ಳುತ್ತೇವೆ ನೀವು ಯಾರು ಕೇಳಲು ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಂತರ ರಘುರಾಜೇ ಅರಸ್, ರಮೇಶ್ ಹಾಗೂ ಮಾದೇಶ್ ಎಂಬುವವರು ಇವರನ್ನು

ಊರಿನಿಂದ ಹೊರಗಡೆ ಕಳುಹಿಸುವುದು ಬೇಡ ಇವರನ್ನು ಜೀಪ್ ಸಮೇತ ಬೆಂಕಿ ಹಾಕಿ ಕೊಲೆ ಮಾಡೋಣವೆಂದು ಕೊಲೆ ಬೆದರಿಕೆ ಹಾಕಿರುತ್ತಾರೆ. ನಂತರ ನಾನು ಜೀಪ್ ಸ್ಟಾರ್ಟ್ ಮಾಡಿಕೊಂಡು ಅಲ್ಲಿ ದೊರೆತ ವಸ್ತುಗಳೊಂದಿಗೆ ಪೋಲೀಸ್ ಠಾಣೆಗೆ ಬಂದಿರುತ್ತೇನೆ.

ಸ್ಥಳದಲ್ಲಿ ಬರೆದ ಮಹಜರ್ ಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯು ನಿಪಿ.1 ರ ಮೇಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.1-ಎಫ಼ ಎಂದು ಗುರುತಿಸಲಾಯಿತು.

ನನ್ನ ಮೇಲೆ ಹಲ್ಲೆ ಮಾಡಿದ ವ್ಯಕ್ತಿ ಈ ದಿನ ನ್ಯಾಯಾಲಯದಲ್ಲಿ ಇಲ್ಲ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದಿರುವ ಮಹೇಶ್ ಬಿನ್ ಚಾಟಿ ಮಾಯಿಗಯ್ಯ, ಮಹೇಶ್ ಬಿನ್ ಶಿವಸ್ವಾಮಿ, ಚೆನ್ನಪ್ಪ, ರಘು ರಾಜೇ ಅರಸ್, ಮುತ್ತುರಾಜ, ಪುಟ್ಟಸ್ವಾಮಿ ಹಾಗೂ ಮಾದೇಶ್ ರವರನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದಿರುವ ಕಬ್ಬಿಣದ ತೂಕದ ಬಟ್ಟನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾಲು.2 ಎಂದು ಗುರುತಿಸಲಾಗಿದೆ. ಆನಂದ್ ಧರಿಸಿದ್ದ ಸಮವಸ್ತ್ರ ಮತ್ತು ನಮ್ಮ ಸಿಬ್ಬಂದಿ ರವಿ ಧರಿಸಿದ್ದ ಶರ್ಟ್ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಅವುಗಳನ್ನು ಈಗಾಗಲೇ ನಿಪಿ.4 ಮತ್ತು 5 ಎಂದು ಗುರುತಿಸಲಾಗಿದೆ. ಸಾಕ್ಷಿಯು ಮದ್ಯ ತುಂಬಿದ ಬಾಟಲಿಗಳು, 2 ಪ್ಲಾಸ್ಟಿಕ್ ಲೋಟಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾಲು.1 ಮತ್ತು 3 ಎಂದು ಗುರುತಿಸಲಾಗಿದೆ. ನಾನು ಘಟನೆ ಸಂಬಂಧ ನನ್ನ ಹೇಳಿಕೆಯನ್ನು ತನಿಖಾಧಿಕಾರಿಯವರಿಗೆ ನೀಡಿದ್ದೇನೆ.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ**

ಆರೋಪಿ ಪರ ವಕೀಲರು ಸಾಕ್ಷಿಯ ಪಾಟಿ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಗಿದೆ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.